ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

ತುಮಕೂರು ಡಿವಿಜನ್ ಕೆ.ಇ.ಬಿ. ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್‌ರವರು ದಿನದಲ್ಲಿ 14 ಗಂಟೆಗಳ ಕಾಲ ಲೋಡ್ ಶೆಡ್ಡಿಂಗ್ ಮಾಡುವಂತೆ ಸೂಚನೆ ನೀಡಿರುವುದು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಇಡೀ ರಾಜ್ಯದಲ್ಲಿ 24 ಗಂಟೆಗಳ ಕಾಲ ನಾವು ರೈತರಿಗೆ ನಿರಂತರವಾಗಿ ವಿದ್ಯುತ್ತನ್ನು ಸರಬರಾಜು ಮಾಡುತ್ತೇವೆ ಎಂದು ಈ ಸದನದಲ್ಲಿ ಒಂದು ಹೇಳಿಕೆಯನ್ನು ಕಳೆದ ವಾರ ಕೊಟ್ಟಿದ್ದಾರೆ. ಈಗ ಏನಾಗಿದೆ ಎಂದರೆ ತುಮಕೂರಿನಲ್ಲಿ ದಿನಾಂಕ 31.07.97 ರಂದು ಅಲ್ಲಿನ ಎಕ್ಸಿಕ್ಯೂಟೀವ್ ಇಂಜಿನಿಯರ್ ಆಫೀಸಿನಿಂದ ಒಂದು ಆದೇಶ ಬಂದಿದೆ. They have instructed all the Assistant Executive Engineers of Tumkur Division. ದಿನಕ್ಕೆ 14 ಗಂಟೆಗಳ ಕಾಲ ಕರೆಂಟ್‌ನ್ನು ನಿಲ್ಲಿಸಬೇಕು, ಲೋಡ್ ಶೆಡಿಂಗ್ ಮಾಡಬೇಕು ಎಂದು ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದಾರೆ. ಇದು ರಾಜ್ಯದಲ್ಲಿ ಎಲ್ಲೂ ಕೂಡ ಆಗಿಲ್ಲ. ತುಮಕೂರಿನಲ್ಲಿ ಮಾತ್ರ ದಿನಕ್ಕೆ 14 ಗಂಟೆಗಳ ಕಾಲ ವಿದ್ಯುತ್ತನ್ನು ನಿಲ್ಲಿಸಬೇಕು ಎನ್ನುವ ಆದೇಶವನ್ನು ಎಕ್ಸಿಕ್ಯೂಟೀವ್ ಇಂಜಿನಿಯರ್ ತುಮಕೂರಿನವರು ಕೊಡುತ್ತಾರೆ. I have already brought this matter to the notice of the Hon'ble Minister for Power. Now, my question is, whether it has come to the notice of the Government or the Board. ಇಡೀ ರಾಜ್ಯದಲ್ಲಿ ಎಲ್ಲೂ ಇಲ್ಲದಿರುವುದು ಬರೀ ತುಮಕೂರು ಜಿಲ್ಲೆಯಲ್ಲಿ ಮಾತ್ರ 4 ಗಂಟೆಗಳ ಕಾಲ ವಿದ್ಯುತ್ತನ್ನು ಕಡಿತ ಮಾಡಬೇಕು ಎಂದು ಆದೇಶವನ್ನು ಏತಕ್ಕೆ ಕೊಟ್ಟರು? ಇವರು ಏಕೆ ಈ ತರಹ ಮಾಡಿದ್ದಾರೆ? ಈ ತಾರತಮ್ಯ ಏಕೆ? ವಿದ್ಯುತ್ ಸಚಿವರು ಹೇಳಿಕೆ ಕೊಡಬೇಕು ಮತ್ತು ಈ ತಾರತಮ್ಯವನ್ನು ನಿಲ್ಲಿಸಬೇಕು. ಈ ರಾಜ್ಯದಲ್ಲಿ ಎಲ್ಲಾ ಕಡೆ ಒಂದು ತರಹ ಇರಬೇಕು. ಪಕ್ಕದ ಹಾಸನ ಜಿಲ್ಲೆಯಲ್ಲಿ ಒಂದು ತರಹ, ಚಿತ್ರದುರ್ಗದಲ್ಲಿ ಬೆಂಗಳೂರಿನಲ್ಲಿ ಒಂದು ತರಹ, ಕೋಲಾರದಲ್ಲಿ ಒಂದು ತರಹ ಇದ್ದು ತುಮಕೂರಿನಲ್ಲಿ ಮಾತ್ರ ದಿನಕ್ಕೆ 14 ಗಂಟೆಗಳ ಕಾಲ ವಿದ್ಯುತ್ತನ್ನು ನಿಲ್ಲಿಸಬೇಕು ಎಂದು ಹೇಳಿದರೆ ಇದರಿಂದ ತೊಂದರೆ ಆಗುತ್ತದೆ. ಮಾನ್ಯ ವಿದ್ಯುತ್ ಸಚಿವರಲ್ಲಿ ಈ ತೊಂದರೆಯನ್ನು ಸರಿಪಡಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ್ (ಮಾನ್ಯ ಇಂಧನ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ತುಮಕೂರಿನಲ್ಲಿ ಈಗಾಗಲೇ 6.3 ಎಂವಿಎ ಕೆಪಾಸಿಟಿಯ ಎರಡು ಟ್ರಾನ್ಸ್‌ಫಾರ್ಮರ್ ಇವೆ. ನಾವು ಲೋಡ್ ಶೆಡ್ಡಿಂಗ್ ತೆಗೆದುಕೊಳ್ಳುವಂತಹ ಕ್ರಮದಿಂದ ಓವರ್ ಲೋಡ್ ಆಗಿ ಡ್ರಿಪ್ ಆಗುವ ಸಾಧ್ಯತೆ ಕೂಡ ಇದೆ. ಆದ್ದರಿಂದ ಡ್ರಿಪ್ ಆದಂತಹ ಸಂದರ್ಭದಲ್ಲಿ ಎಲ್ಲಾ ಟ್ರಾನ್ಸ್‌ಫಾರ್ಮರ್ಸ್ ಸುಟ್ಟು ಹೋಗಿ ಅಲ್ಲಿ ಕರಾಳ ಛಾಯೆ ಮೂಡುವುದರ ಬಗ್ಗೆ ಈಗಾಗಲೇ ಮುನ್ಸೂಚನೆಯಂತೆ ತುಮಕೂರು ಜಿಲ್ಲೆಯಲ್ಲಿ ಕೆಇಬಿ ಇಲಾಖೆಯವರ ಕ್ರಮತೆಗೆದುಕೊಂಡಿದ್ದಾರೆ. ಈಗೇನು ಎಕ್ಸಿಕ್ಯೂಟೀವ್ ಇಂಜಿನಿಯರ್ ಆದೇಶ ಹೊರಡಿಸಿದ್ದಾರೆ, ಅದರ ಬಗ್ಗೆ ಬೇರೆ ಬೇರೆ ರೀತಿಯಿಂದ ಪರ್ಯಾಯ ವ್ಯವಸ್ಥೆ ಈಗಾಗಲೇ ಮಾಡುತ್ತಿದ್ದೇವೆ. ಆದಷ್ಟು ಬೇಗ ವ್ಯವಸ್ಥೆ ಮಾಡಿ ತುಮಕೂರಿನಲ್ಲಿರತಕ್ಕ ತೊಂದರೆಯನ್ನು ನಿವಾರಿಸಲು ಸರ್ಕಾರ ಸತತ ಪ್ರಯತ್ನವನ್ನು ಮಾಡುತ್ತದೆ ಎಂದು ತಮ್ಮ ಮುಖಾಂತರ ತಿಳಿಸುವುದಕ್ಕೆ ಬಯಸುತ್ತೇನೆ.